574 ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ನಿಗಮದ ಗುರುತಿನ ಸಂಖ್ಯೆ: (ಸಿ.ಐ.ಎನ್): ಯು40109ಕೆಎ1999ಎಸ್.ಜಿ.ಸಿ025521)
ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.

ದೂ: 08354 – 200899,
ಮೋ: 9448365289; Fax : 08354 – 200899
ಮಿಂಚಂಚೆ: eeemwdbagalkot@gmail.com,
eemwdbagalkot@rediffmail.com

ಕಾರ್ಯನಿರ್ವಾಹಕ ಇಂಜಿನೀಯರರು (ವಿ),
ಬೃಹತ್ ಕಾಮಗಾರಿ ವಿಭಾಗ ಕಛೇರಿ,
1ನೇ ಮಹಡಿ, ಪ್ರಸರಣ ವಲಯ ಕಛೇರಿಗಳ
ಸಂಕೀರ್ಣ, 110 ಕೆ.ವ್ಹಿ. ನವನಗರ ಗ್ರಿಡ್,
ನವನಗರ, ಬಾಗಲಕೋಟ – 587103.

ಸಂಖ್ಯೆ: 614/ಬಾಕೋ/ಕಾನಿಇಂ(ವಿ)/ಬೃಕಾವಿ/ಸಕಾನಿಇಂ(ಕ)/ಸಇ9/21-22/ 4439-43
ಲಗತ್ತು:
ದಿನಾಂಕ : 23/12/21

ಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಜಿಲ್ಲಾ ಆಡಳಿತ ಭವನ, 2ನೇ ಮಹಡಿ,
ಬಾಗಲಕೋಟ ವಿಭಾಗ,
**ಬಾಗಲಕೋಟ.**

ಮಾನ್ಯರೆ,

**ವಿಷಯ :** ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ **220ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ ಮಹಾಲಿಂಗಪೂರದಿಂದ 110ಕೆವಿ ವಿದ್ಯುತ್ ಉಪ-ಕೇಂದ್ರ ಜಮಖಂಡಿಯ ವರೆಗೆ** 110ಕೆವಿಯ ಒಂಟಿ ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಪರಿವರ್ತನೆ ಮಾಡುವ ಕೆಲಸಕ್ಕೆ **18.458 ಹೆ.** ಅರಣ್ಯ ಪ್ರದೇಶವನ್ನು **(ಪ್ರಪೋಸಲ್ ಸಂಖ್ಯೆ: ಎಫ್‌ಪಿ/ಕೆಎ/ಟಿಆರ್‌ಎಎನ್‌ಎಸ್/16981/2015)** ಉಪಯೋಗಿಸುವುದಕ್ಕೆ ಅನುಮೋದನೆಯನ್ನು ನೀಡುವ ಕುರಿತು.

**ಉಲ್ಲೇಖ :**
1. ತಮ್ಮ ಕಛೇರಿ ಪತ್ರ ಸಂಖ್ಯೆ: ಬಿ2/ಜಿಎಫ್ಎಲ್/ಎಂಎಲ್‌ಪಿ/18.458/ವಿವ-111/2013-14, ದಿನಾಂಕ: 19.08.2021.
2. ಈ ಕಛೇರಿ ಪತ್ರ ಸಂಖ್ಯೆ: 2455-57, ದಿನಾಂಕ: 08.10.2021.
3. ತಮ್ಮ ಕಛೇರಿ ಪತ್ರ ಸಂಖ್ಯೆ: ಬಿ2/ಜಿಎಫ್ಎಲ್/ಎಂಎಲ್‌ಪಿ/18.458/ವಿವ-111/2013-14/1358, ದಿನಾಂಕ: 04.11.2021.

~~~0~~~

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ **220ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ ಮಹಾಲಿಂಗಪೂರದಿಂದ 110ಕೆವಿ ವಿದ್ಯುತ್ ಉಪ-ಕೇಂದ್ರ ಜಮಖಂಡಿಯವರೆಗೆ,** 110 ಕೆವಿಯ ಒಂಟಿ ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಪರಿವರ್ತನೆ ಮಾಡುವ ಕೆಲಸಕ್ಕೆ **18.458 ಹೆ.** ಅರಣ್ಯ ಪ್ರದೇಶವನ್ನು **(ಪ್ರಪೋಸಲ್ ಸಂಖ್ಯೆ: ಎಫ್‌ಪಿ/ಕೆಎ/ಟಿಆರ್‌ಎಎನ್‌ಎಸ್/16981/2015)** ಉಪಯೋಗಿಸುವುದಕ್ಕೆ ಅನುಮೋದನೆ ಸಲುವಾಗಿ, ಉಲ್ಲೇಖ ಪತ್ರ-1 ರ ಪ್ರಕಾರ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರುರವರು 1987 ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಕವಿಪ್ರನಿನಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ/ನೌಕರರ ಮಾಹಿತಿಯನ್ನು ಸಲ್ಲಿಸಲು ಕೇಳಿರುತ್ತಾರೆ.

ಸದರಿ ಮಾರ್ಗವು ಒಂಟಿ ಗೋಪುರದ ಒಂಟಿ ಮಾರ್ಗವು ಇದ್ದು, 1987 ರಲ್ಲಿ ಚಾಲನೆಗೊಂಡಿರುತ್ತದೆ. ಸದರಿ ಮಾರ್ಗವು ನಿರ್ವಹಣೆ ಮಾಡುವಾಗ, ಆಗಿನ ಕೆ.ಇ.ಬಿ. ಅಧಿಕಾರಿಗಳು ಯಾವುದೇ ದುರುದ್ದೇಶವಿಲ್ಲದೆ, ಬಹುಶ: ಅರಣ್ಯ ಪ್ರದೇಶದ ಗಡಿ ಗುರುತಿಸುವಿಕೆ ಮಾಹಿತಿ ಇರದ ಮೇರೆಗೆ, 110 ಕೆ.ವ್ಹಿ. ಮಾರ್ಗವನ್ನು ನಿರ್ಮಿಸಿರುತ್ತಾರೆ. ಮಹಾಲಿಂಗಪೂರ-ಜಮಖಂಡಿ ಮಾರ್ಗದಲ್ಲಿನ ಪ್ರದೇಶದಲ್ಲಿ ಅತೀ ಹೆಚ್ಚು ಕಬ್ಬು ಬೆಳೆಯುವ ಪ್ರದೇಶವಾಗಿರುತ್ತದೆ. ಸದರಿ ಮಾರ್ಗದಿಂದ ಮಹಾಲಿಂಗಪೂರ-ಜಮಖಂಡಿ ಸುತ್ತಮುತ್ತಲಿನ ರೈತರು ಬಹಳ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದ್ದರು.
~~~

ಒಂಟಿ ಗೋಪುರದ ವಾಹಕವು ಬಹಳ ಹಳೆಯದಾಗಿದ್ದು, ಅಪಘಾತಗಳು ಸಂಬವಿಸುವ ಸಾಧ್ಯತೆ ಬಹಳ ಇರುತ್ತದೆ. ಆದ್ದರಿಂದ, ಈ ಎಲ್ಲ ನ್ಯೂನ್ಯತೆಗಳನ್ನು ಸರಿಪಡಿಸುವ ಸಲುವಾಗಿ, 110 ಕೆ.ವ್ಹಿ. ಜೋಡಿ ಗೋಪುರಗಳ ಮೇಲೆ ಜೋಡಿ ಮಾರ್ಗದ ವಾಹಕ ಅಳವಡಿಸುವ ಯೋಜನೆಯಿರುತ್ತದೆ. ಜೋಡಿ ಗೋಪುರಗಳನ್ನು ಅಳವಡಿಸುವುದರಿಂದ, ವಿದ್ಯುತ್ ವಾಹಕದ ನೆಲದ ತೆರವು (ಗ್ರೌಂಡ್ ಕ್ಲಿಯರನ್ಸ್) ಹೆಚ್ಚಿಗೆ ಆಗುವುದು.

ಸದರಿ ಕಾಮಗಾರಿ 110 ಕೆ.ವ್ಹಿ. ಮಾರ್ಗವು ಅರಣ್ಯ ಪ್ರದೇಶದ (8.392 ಕಿ.ಮೀ.) ಹೊರತಾಗಿ, **14.605/23.897 ಕಿ.ಮೀ.** ಮಾರ್ಗದ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಯಿಂದ, 110/11 ಕೆ.ವ್ಹಿ. ವಿದ್ಯುತ್ ಉಪ-ಕೇಂದ್ರ ಜಮಖಂಡಿ, 110/11 ಕೆ.ವ್ಹಿ. ವಿದ್ಯುತ್ ಉಪ-ಕೇಂದ್ರ ನಾವಲಗಿ ಮತ್ತು 110/11 ಕೆ.ವ್ಹಿ. ವಿದ್ಯುತ್ ಉಪ-ಕೇಂದ್ರ ಬನಹಟ್ಟಿ ಗಳಿಗೆ ಪರ್ಯಾಯ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗುವುದು. ಈ ಯೋಜನೆಯಿಂದ ಜಮಖಂಡಿ ನಗರ, ಬನಹಟ್ಟಿ ನಗರ, ಮದರಕಂಡಿ, ಕಲ್ಲಹಳ್ಳಿ, ಹಿಪ್ಪರಗಿ, ಕುಲಹಳ್ಳಿ, ಸಿದ್ದಾಪುರ, ಕುಂಬಾರ ಹಳ್ಳ, ಸನಾಳ, ಆಲಗೂರ, ಕುಂಚನೂರ, ಜಕನೂರ, ಹುನ್ನೂರು, ಕಡಪಟ್ಟಿ, ನಾವಲಗಿ, ಜಗದಾಳ, ಬಂಡಿಗಣಿ, ಯಲ್ಲಟ್ಟಿ, ಅಸ್ಕಿ-ಆಸಂಗಿ, ಬನಹಟ್ಟಿ ಕೆರಿ, ಬಿಸುಗುಪ್ಪ ಮತ್ತು ಸುತ್ತಮುತ್ತಲಿನ ಗ್ರಾಮಗಳ ಗ್ರಾಹಕರುಗಳಿಗೆ ಗುಣಮಟ್ಟದ ವಿದ್ಯುತ್ ಪೂರೈಸಲು ಅನುಕೂಲವಾಗುವುದು.

ಸದರಿ ಯೋಜನೆಯು ಫೆಬ್ರುವರಿ-2017 ರಲ್ಲಿ ಚಾಲನೆಗೊಂಡಿದ್ದು, **ಮೇ-2018 ರಲ್ಲಿ 14.605 ಕಿ.ಮೀ.** ಮಾರ್ಗದ ಕಾಮಗಾರಿಯನ್ನು ಪೂರ್ಣಗೊಳಸಿ, ಚಾಲನೆಗೊಳಸಲಾಗಿದೆ. ಉಳಿದ 9.292 ಕಿ.ಮೀ. ಮಾರ್ಗವು ಅರಣ್ಯ ಇಲಾಖೆಯ ಅನುಮೋದನೆಯ ಸಲುವಾಗಿ, ಸ್ಥಗಿತಗೊಂಡಿರುತ್ತದೆ.

ಬಾಗಲಕೋಟ ವಿಭಾಗ ಕಛೇರಿಯು 2000 ಇಸವಿಯಲ್ಲಿ ಚಾಲನೆಗೊಂಡಿದ್ದು, ಈ ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳ ವಿವರಗಳು ಲಭ್ಯವಿರುವುದಿಲ್ಲ. ಆದ್ದರಿಂದ, ದಯಮಾಡಿ ಸದರಿ ಯೋಜನೆಗೆ ಅನುಮೋದನೆ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ.

ಇದು ತಮ್ಮ ದಯಾಪರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

23/1/24

**ಕಾರ್ಯನಿರ್ವಾಹಕ ಇಂಜನೀಯರ್ (ವಿ),**
ಬೃಹತ್ ಕಾಮಗಾರಿ ವಿಭಾಗ, ಕ.ವಿ.ಪ್ರ.ನಿ.ನಿ,
**ಬಾಗಲಕೋಟೆ**

<u>ಪ್ರತಿಯನ್ನು ದಯಾಪರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ,</u>

1. ಮುಖ್ಯ ಅಭಿಯಂತರರು, ವಿದ್ಯುತ್, ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ.
2. ಅಧೀಕ್ಷಕ ಅಭಿಯಂತರರು (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಬಾಗಲಕೋಟೆ.
3. ಅಧೀಕ್ಷಕ ಅಭಿಯಂತರರು (ವಿ), ಯೋಜನಾ ಮೇಲ್ವಿಚಾರಣೆ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಪ್ರತಿಯನ್ನು</u>

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ (ವಿ), ಬೃ. ಕಾ. ಉಪ-ವಿಭಾಗ-2, ಕವಿಪ್ರನಿನಿ, ಬಾಗಲಕೋಟೆ.
ಮುಕ/ಕಪ್ರ.